**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 15.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ 2 ರಿಂದ 6 ಮತ್ತು 9 ರವರ ಪರವಾಗಿ ಶ್ರೀ.ಹೆಚ್.ಎ.ಕೆ. ವಕೀಲರಿಂದ.**

ನಾನು ಹಾಜರುಪಡಿಸಿರುವ ಶಾಲಾ ದಾಖಲಾತಿಗಳು ನನ್ನ ಮತ್ತು ವಾದಿ 3 ರವರಿಗೆ ಸಂಬಂಧಪಟ್ಟಿರುತ್ತವೆಂದರೆ ಸರಿ. ಈ ದಾಖಲೆಗಳು ಯಡಹಳ್ಳಿ ಮತ್ತು ಇಂಗಳಗಿ ಶಾಲೆಯ ದಾಖಲಾತಿಗಳು ಎಂದರೆ ಸರಿ. ಈ ದಾಖಲೆಗಳಲ್ಲಿ ಸಿದ್ದಪ್ಪ ಬಸಪ್ಪ ಕಲ್ಯಾಣಿ ಇವರು ಮೂಲತಃ ಯಾದವಾಡ ಗ್ರಾಮದವರು ಎಂದರೆ ಸರಿ. ಸಿದ್ದಪ್ಪ ಬಸಪ್ಪ ಕಲ್ಯಾಣಿ ಹಾಗೂ ವಾದಿ ನಂ. 3 ರವರ ವಿವಾಹವಾದ ಬಗ್ಗೆ ಹೆಳವರು ನೀಡಿರುವ ದಾಖಲೆಯನ್ನು ಹೊರತುಪಡಿಸಿ ಬೇರೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಇವರ ವಿವಾಹದ ಆಮಂತ್ರಣ ಪತ್ರಿಕೆಯಾಗಲೀ, ವಿವಾಹದ ಯಾದಿಯಾಗಲೀ, ಫೋಟೋಗಳಾಗಲೀ ಹಾಜರುಪಡಿಸಿರುವುದಿಲ್ಲ. ನಾವು ಕುಟುಂಬದ ಮೂಲ ಪುರುಷ ಸಿದ್ದಪ್ಪ ಬಸಪ್ಪ ಕಲ್ಯಾಣಿ ಇವರಿಗೆ ಸಂಬಂದಪಟ್ಟವರು ಅಲ್ಲ ಅಂದರೆ ಸರಿಯಲ್ಲ. ನಿಪಿ-32 ರಿಂದ 39 ರ ದಾಖಲೆಗಳು ಈ ದಾವೆಗೆ ಅನುಕೂಲವಾಗುವ ಸಲುವಾಗಿ ಸೃಷ್ಟಿಮಾಡಿಕೊಂಡು ಬಂದು ಹಾಜರುಪಡಿಸಿದ್ದೇವೆಂದರೆ ಸರಿಯಲ್ಲ. ನನ್ನ ತಾಯಿಯ ತವರು ಮನೆ ವಜ್ರಮಟ್ಟಿ ಗ್ರಾಮದವರಾಗಿದ್ದರಿಂದ ನಾನು ಅಲ್ಲೇ ಜನ್ಮ ತಾಳಿರುವೇನು. ದಾವಾ ಆಸ್ತಿಗಳು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಸಹಿತ ಈಸುಳ್ಳು ದೂರು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ